ಇಂದು ದಿ**: 16.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು ವಾದಿಗಳ ಪರಃಶ್ರಿ ಎಂ ಎಸ್ ಎಸ್ ವಕೀಲರಿಂದ**.**

ನಮ್ಮ ತಾತನ ಹೆಸರು ಬೋಗಪ್ಪ. ಸದರಿ ಬೋಗಪ್ಪನಿಗೆ 4 ಜನ ಮಕ್ಕಳು. ಮೊದಲನೆಯವರು ತಿಮ್ಮಪ್ಪ, ಎರಡನೇಯವರು ಬೋಗಪ್ಪ, ಮೂರನೆಯವರು ಹನುಮಂತಪ್ಪ ಮತ್ತು ಕೊನೆಯವರು ಸಣ್ಣತಿಮ್ಮಪ್ಪ. ಸದರಿ ಸಣ್ಣತಿಮ್ಮಪ್ಪ ನಮ್ಮ ತಂದೆ. ನಮ್ಮ ದೊಡ್ಡಪ್ಪ ಬೋಗಪ್ಪನ ಹೆಂಡತಿಯ ಹೆಸರು ನಾಗಮ್ಮ. ಸದರಿ ನಾಗಮ್ಮ ಇವಳು ಕ್ಯಾನ್ಸರ್ ಕಾಯಿಲೆಯಿಂದ ಮೃತಪಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ನಾಗಮ್ಮ 1955 ರಲ್ಲಿ ಮೃತಪಟ್ಟಿರುತ್ತಾರೆ. ನಮ್ಮ ದೊಡ್ಡಪ್ಪ ಬೋಗಪ್ಪ ಇವನಿಗೆ ಇಂದ್ರಮ್ಮ ಮತ್ತು ಬಸಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎನ್ನುವುದು ನಿಜ. ಸದರಿ ಇಂದ್ರಮ್ಮ ಮೃತಪಟ್ಟು ಈಗ 2 ತಿಂಗಳು ಆಗಿರುತ್ತದೆ. ಇಂದ್ರಮ್ಮ ನ ಇವಳಿಗೆ 3 ಜನ ಮಕ್ಕಳು. ಅವರು ಮೊದಲನೆಯವರು ಜಾನಕಮ್ಮ, ಎರಡನೆಯವರು ಶಿವಣ್ಣ, ಮೂರನೆಯವರು ಮಂಜುನಾಥ. ನಮ್ಮ ದೊಡ್ಡಪ್ಪ ಹನುಮಂತಪ್ಪನ ಹೆಂಡತಿಯ ಹೆಸರು ಹನುಮಕ್ಕ. ಸದರಿ ಹನುಮಕ್ಕ ಇವಳು ಕ್ಯಾನ್ಸರ್ ಕಾಯಿಲೆಯಿಂದ ಮೃತಪಟ್ಟಿರುತ್ತಾಳೆ ಎಂದರೆ ಸರಿಯಲ್ಲ. ನಮ್ಮ ತಾಯಿಯ ಹೆಸರು ಗೌರಮ್ಮ. ನಮ್ಮ ತಾಯಿ ಕ್ಯಾನ್ಸರ್ ಕಾಯಿಲೆಯಿಂದ ಮೃತಪಟ್ಟಿರುತ್ತಾಳೆ ಎನ್ನುವುದು ನಿಜ. ನಮ್ಮ ದೊಡ್ಡಪ್ಪ ಬೋಗಪ್ಪ ಇವನು 1975 ರಲ್ಲಿ ಮೃತಪಟ್ಟಿರುತ್ತಾನೆ. ಸದರಿ ಬೋಗಪ್ಪ ಕ್ಯಾನ್ಸರ್ ಕಾಯಿಲೆಯಿಂದ ಮೃತಪಟ್ಟಿರುತ್ತಾನೆ ಎಂದರೆ ಸಾಕ್ಷಿ ವಯೋಸಹಜ ಕಾಯಿಲೆಯಿಂದ ಮೃತಪಟ್ಟಿರುತ್ತಾನೆ ಎಂದು ಹೇಳುತ್ತಾರೆ. ಸದರಿ ಬೋಗಪ್ಪ ಇವನ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ. ಸದರಿ ಪ್ರಮಾಣ ಪತ್ರವನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸದರಿ ಮರಣ ಪ್ರಮಾಣ ಪತ್ರ ನಮಗೆ ಸಿಕ್ಕಿರುವುದಿಲ್ಲ. ಸದರಿ ಬೋಗಪ್ಪ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರಿಂದ ಅವನ ಮರಣ ಪ್ರಮಾಣ ಪತ್ರ ನಮಗೆ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಸದರಿ ಬೋಗಪ್ಪ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಆ ಆಸ್ಪತ್ರೆಯಿಂದ ತಂದರೆ ಗೊತ್ತಾಗುತ್ತದೆ ಎನ್ನುವ ಕಾರಣ ತಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಬೋಗಪ್ಪ ಮೃತಪಡುವ 2-3 ವರ್ಷ ಮೊದಲು ಕಾಯಿಲೆಯಿಂದ ಬಳಲುತ್ತಿದ್ದ ಎಂದರೆ ಸರಿಯಲ್ಲ. ಸದರಿ ಬೋಗಪ್ಪ ವಾಸವಾಗಿದ್ದ ಮನೆ ನಂಬರ್ ಮತ್ತು ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ಸದರಿ ಬೋಗಪ್ಪ ಪ್ರತ್ಯೇಕವಾಗಿ ವಾಸವಾಗಿರಲಿಲ್ಲ, ನಮ್ಮ ತಂದೆಯ ಜೊತೆಯಲ್ಲಿ ವಾಸವಾಗಿದ್ದ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಬೋಗಪ್ಪ ಅನ್ಯೂನ್ಯವಾಗಿದ್ದರು ಎನ್ನುವುದು ನಿಜ.

ನಮ್ಮ ದೊಡ್ಡಪ್ಪ ಬೋಗಪ್ಪ ಇವನು ಸುಮಾರು 12 ಜಮೀನುಗಳನ್ನು ಖರೀದಿ ಮಾಡಿರುತ್ತಾನೆ. ನಮ್ಮ ತಂದೆ 6-7 ಜಮೀನುಗಳನ್ನು ಖರೀದಿ ಮಾಡಿರುತ್ತಾನೆ. ನನ್ನ ಮುಖ್ಯ

ವಿಚಾರಣೆ ಪ್ರಮಾಣ ಪತ್ರದಲ್ಲಿ ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಬೋಗಪ್ಪ ಜಂಟಿಯಾಗಿ ಇದ್ದರು ಎಂದು ಬರೆಸಿರುತ್ತೇನೆ. 1953 ರಲ್ಲಿ ನಮ್ಮ ತಂದೆ ಅಲ್ಪವಹಿ ಆಗಿದ್ದ ಎನ್ನುವುದು ಪಾಲುಪಟ್ಟಿಯಲ್ಲಿ ನಮೂದು ಇರುತ್ತದೆ. ಆ ರೀತಿ ಪಾಲು ಪಟ್ಟಿಯಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ ಪಾಲುಪಟ್ಟಿಯಲ್ಲಿ ಅಲ್ಪವಹಿ ಸಂರಕ್ಷಣಾದಾರರು ಎಂದು ಬರೆದಿರುತ್ತಾರೆ. ಸದರಿ ಪಾಲುಪಟ್ಟಿಯಲ್ಲಿ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಬರೆದಿಲ್ಲ, ಆದರೆ ಚೆಕ್ಕುಬಂದಿಯನ್ನು ಬರೆದಿರುತ್ತಾರೆ. ಭಾಗ ಆಗದ ಕಾರಣ, ಸರ್ವೆ ನಂಬರ್ ಮತ್ತು ವಿಸ್ತೀರ್ಣ ಸದರಿ ಪಾಲುಪಟ್ಟಿಯಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. 1958 ರಲ್ಲಿ ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಬೋಗಪ್ಪ ಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಷಯವನ್ನು ಲಿಖಿತ ಹೇಳಿಕೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. 1958 ರಲ್ಲಿ ಭಾಗ ಆಗದ ಕಾರಣ, ಆ ರೀತಿ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಇವರ ಜೊತೆಯಲ್ಲಿ ಇನ್ನೊಬ್ಬ ದೊಡ್ಡಪ್ಪ ಹನುಮಂತಪ್ಪ ಒಟ್ಟಿಗೆ ಇದ್ದರು ಎಂದರೆ ಸರಿಯಲ್ಲ.

ನಮ್ಮ ದೊಡ್ಡಪ್ಪ ಹನುಮಂತಪ್ಪ ಇವರು 1953 ರಲ್ಲಿ ಭಾಗ ಮಾಡಿಕೊಂಡಿರುತ್ತಾರೆ. 1953 ರಲ್ಲಿ ನಮ್ಮ ತಂದೆಗೆ ಸುಮಾರು 14-15 ವರ್ಷ ವಯಸ್ಸು ಆಗಿತ್ತು. ಮಳಲಿ ಗ್ರಾಮದ ಸರ್ವೆ ನಂ. 256, 259 ಮತ್ತು 260 ರ ಜಮೀನುಗಳು ನಮಗೆ ಸಂಬಂಧಪಟ್ಟವು ಅಲ್ಲ. ಸರ್ವೆ ನಂ. 256 ಮತ್ತು 260 ರ ಜಮೀನುಗಳನ್ನು ನಿಡಿಃ 1 ರಲ್ಲಿ ಸೇರಿಸಿರುತ್ತದೆ. ಸರ್ವೆ ನಂ. 279 ನ್ನು ನಮ್ಮ ದೊಡ್ಡಪ್ಪ ಬೋಗಪ್ಪ ಇವನು ಖರೀದಿ ಮಾಡಿರುತ್ತಾನೆ. ಸದರಿ ಜಮೀನು ನಿಡಿಃ 1 ರಲ್ಲಿ ಸೇರ್ಪಡೆ ಆಗಿರುತ್ತದೆ. ನಿಡಿಃ 1 ಸೃಷ್ಟಿ ಮಾಡಿದ್ದರಿಂದ ಬೋಗಪ್ಪ ಇವನಿಗೆ ಸಂಬಂಧ ಇಲ್ಲದ ಜಮೀನುಗಳನ್ನು ಅದರಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಬೋಕಿಕೆರೆ ಗ್ರಾಮದ ಸರ್ವೆ ನಂ. 86/2 ರಲ್ಲಿ 2 ಎಕರೆ 4 ಗುಂಟೆ, ಸರ್ವೆ ನಂ. 45/1 ರಲ್ಲಿ 1 ಎಕರೆ ಇರುತ್ತದೆ. ಸದರಿ ಎರಡು ಜಮೀನುಗಳು ನಮ್ಮ ತಂದೆಯ ಹೆಸರಿಲ್ಲಿ ಇದ್ದವು ಈಗ ನನ್ನ ಹೆಸರಿನಲ್ಲಿ ಇರುತ್ತವೆ. ಸದರಿ 2 ಜಮೀನುಗಳನ್ನು ವಾದಿಯರಿಗೆ ಕೊಟ್ಟಿರುತ್ತದೆ ಎಂದು ಹೇಳಿರುವುದು ಸುಳ್ಳು ಇದ್ದ ಕಾರಣ, ಇಂದಿಗೂ ಖಾತೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಿಃ 04.01.1967 ರಲ್ಲಿ ಮಳಲಿ ಗ್ರಾಮದ ಸರ್ವೆ ನಂ. 279 ರ ಜಮೀನನ್ನು ನಮ್ಮ ದೊಡ್ಡಪ್ಪ ಬೋಗಪ್ಪ ಖರೀದಿ ಮಾಡಿರುತ್ತಾನೆ ಎನ್ನುವುದು ನಿಜ. ಸದರಿ ಜಮೀನು 3 ಎಕರೆ 29 ಗುಂಟೆ ಇರುತ್ತದೆ. ಮಳಲಿ ಗ್ರಾಮದ ಸರ್ವೆ ನಂ. 257 ರಲ್ಲಿ 1 ಎಕರೆ 20 ಗುಂಟೆ ಯನ್ನು ದಿಃ 12.06.1961 ರಲ್ಲಿ ಬೋಗಪ್ಪ ಖರೀದಿ ಮಾಡಿರುತ್ತಾನೆ ಎನ್ನುವುದು ನಿಜ. ಮಳಲಿ ಗ್ರಾಮದ ಸರ್ವೆ ನಂ. 253 ರಲ್ಲಿ 4 ಎಕರೆ 15 ಗುಂಟೆಯನ್ನು ಜಿಲ್ಲಾಧಿಕಾರಿಗಳು ಬೋಗಪ್ಪ ಇವರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿ ಜೋಡಿದಾರರು ಸೀತಾರಾಮಯ್ಯ ಇವರಿಂದ ನಮ್ಮ ದೊಡ್ಡಪ್ಪ ಬೋಗಪ್ಪ ಮತ್ತು ದೇವಿಕರಿಯಪ್ಪ ಇವರಿಗೆ ಜಂಟಿಯಾಗಿ ಖರೀದಿ ಆಗಿದೆ ಎಂದು ಹೇಳುತ್ತಾರೆ. ಸದರಿ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ.

ವಾದಿಗಳು ನಮ್ಮ ದೊಡ್ಡಪ್ಪ ಬೋಗಪ್ಪನ ಮಕ್ಕಳು ಎನ್ನುವುದು ನಿಜ. ಒಟ್ಟು 67 ಆಸ್ತಿಗಳ ಮೇಲೆ ಈ ಕೇಸನ್ನು ಸಲ್ಲಿಸಿರುತ್ತಾರೆ. ಸದರಿ ಆಸ್ತಿಗಳು ಯಾವುವು ಎಂದು ಓದಿ ತಿಳಿದುಕೊಂಡಿರುತ್ತೇನೆ.

ದಾವಾ ತಪಶೀಲಿನ 54 ರಿಂದ 46 ನೇ ಆಸ್ತಿಗಳು ನಮ್ಮ ದೊಡ್ಡಪ್ಪ ಬೋಗಪ್ಪ ಖರೀದಿ ಮಾಡಿದ ಆಸ್ತಿಗಳು ಎಂದರೆ ಸಾಕ್ಷಿ ಒಂದು ಹನುಮಂತಪ್ಪ, ಇನ್ನೊಂದು ಸಣ್ಣತಿಮ್ಮಪ್ಪ ಮತ್ತೊಂದು ರಾಮಪ್ಪ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ 3 ಆಸ್ತಿಗಳು ಹನುಮಂತಪ್ಪ, ಸಣ್ಣತಿಮ್ಮಪ್ಪ ಮತ್ತು ರಾಮಪ್ಪ ಇವರ ಹೆಸರಿಗೆ ಇರುತ್ತವೆ. ಸದರಿ 3 ಆಸ್ತಿಗಳು ಬೋಗಪ್ಪ ಇವನ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಮಳಲಿ ಗ್ರಾಮದ ಸರ್ವೆ ನಂ. 279,257 ಮತ್ತು 253 ನಿಡಿಃ 1 ರಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಿಡಿಃ 1 ಸೃಷ್ಟಿಸಿದ ದಾಖಲೆಯಾಗಿದ್ದರಿಂದ, ಸದರಿ ಜಮೀನುಗಳನ್ನು ಅದರಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಿಡಿಃ 1 ರ ಬಗ್ಗೆ ವಾದಿಗಳಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಡಿಃ 1 ನ್ನು ನಮ್ಮ ದೊಡ್ಡಪ್ಪ ಸಿದ್ದಜ್ಜಿ ಅಳಿಯ ನಾಗೇನಹಳ್ಳಿ ತಿಮ್ಮಣ್ಣ ಇವರ ಮೂಲಕ ನಮ್ಮ ತಂದೆಗೆ ಕೊಟ್ಟಿದ್ದ. ಸದರಿ ನಿಡಿಃ 1 ನ್ನು 1975 ರಲ್ಲಿ ಕೊಟ್ಟಿರುತ್ತಾರೆ. ನಮ್ಮ ದೊಡ್ಡಪ್ಪ ಕಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದಾಗ ಅವನಿಗೆ ಏನು ವಿಷಯ ತಿಳಿಯದಂತೆ ನಿಡಿಃ 1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿಃ 1 ಕ್ಕೆ ನಮ್ಮ ದೊಡ್ಡಪ್ಪ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ದೊಡ್ಡಪ್ಪನಿಗೆ ಸೇರಿದ ಆಸ್ತಿಗಳಲ್ಲಿ 1 ಆಸ್ತಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳು ನಿಡಿಃ 1 ರಲ್ಲಿ ಸೇರಿರುತ್ತವೆ. ನಿಡಿಃ 1 ರಲ್ಲಿ ಇಲ್ಲದೆ ಇರುವಂತಹ ಆಸ್ತಿ ಹೊಸದುರ್ಗದ ವಿನಾಯಕ ಬಡಾವಣೆಯಲ್ಲಿರುವ ಮನೆ ಅಂದರೆ ದಾವಾ ತಪಶೀಲಿನ 60 ನೇ ಆಸ್ತಿ. ದಾವಾ ತಪಶೀಲಿನ 60 ನೇ ಆಸ್ತಿಯಲ್ಲಿ ನಮ್ಮ ತಂದೆ ಆರ್ ಸಿ ಸಿ ಮನೆಯನ್ನು ಕಟ್ಟಿಸಿರುವ ಕುರಿತು ದಾಖಲೆಯನ್ನು ಹಾಜರುಪಡಿಸಿಲ್ಲ. ನಮ್ಮ ತಂದೆ 2002 ರಲ್ಲಿ ಮೃತಪಟ್ಟಿ ನಂತರ ನಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತೇವೆ. ಆ ರೀತಿ ಖಾತೆ ಬದಲಾವಣೆ ಸಲುವಾಗಿ ವಾದಿಯರ ಸಹಿಯನ್ನು ಪಡೆದಿಲ್ಲ. ದಾವಾ ತಪಶೀಲಿನ 60 ನೇ ಆಸ್ತಿಯಲ್ಲಿ ನಮ್ಮ ತಂದೆ ಆರ್ ಸಿ ಸಿ ಮನೆಯನ್ನು ಕಟ್ಟಿಸಿರುತ್ತಾನೆ ಎನ್ನುವುದನ್ನು ಲಿಖಿತ ಹೇಳಿಕೆಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. 1958 ರಲ್ಲಿ ಮೌಖಿಕವಾಗಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಷಯವನ್ನು ನಮ್ಮ ಲಿಖಿತ ಹೇಳಿಕೆಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. 1958 ರಲ್ಲಿ ಆದ ಪಾಲುವಿಭಾಗದಲ್ಲಿ ಬೋಗಪ್ಪನಿಗೆ ಬೋಕಿಕೆರೆ ಗ್ರಾಮದ ಸರ್ವೆ 79 ರಲ್ಲಿ 2 ಎಕರೆ 30 ಗುಂಟೆ, ಸರ್ವೆ ನಂ . 86 ರಲ್ಲಿ 2 ಎಕರೆ 4 ಗುಂಟೆ, ಚೆನ್ನಸಮುದ್ರ ಸರ್ವೆ ನಂ. 36 ರಲ್ಲಿ 28 ಗುಂಟೆ, ಮಳಲಿ ಸರ್ವೆ ನಂ. 253 ರಲ್ಲಿ 1 ಎಕರೆ, ಬೋಕಿಕೆರೆ ಗ್ರಾಮದ ಸರ್ವೆ ನಂ. 45 ರಲ್ಲಿ 30 ಗುಂಟೆ ಹಿಸ್ಸೆಗೆ ಬಂದಿರುತ್ತವೆ. ಕೆ. ಕೆ. ಹಟ್ಟಿಯ 1 ಅಂಕಣದ ಮನೆಯ ನಮ್ಮ

ದೊಡ್ಡಪ್ಪ ಬೋಗಪ್ಪನ ಹಿಸ್ಸೆಗೆ ಬಂದಿತ್ತು. ಸದರಿ ಆಸ್ತಿ ನಿಡಿಃ 1 ರಲ್ಲಿ ನಮೂದು ಇಲ್ಲ.

ನಮ್ಮ ತಾತ ಬೋಗಪ್ಪನ ಮೊದಲನೇ ಹೆಂಡತಿ ಕರಿಯಮ್ಮನ ಮಗ ತಿಮ್ಮಪ್ಪ ಇವನು ಮೊದಲೇ ಭಾಗ ತೆಗೆದುಕೊಂಡಿದ್ದ ಎಂದರೆ ಸಾಕ್ಷಿ ಎಲ್ಲರು ಒಟ್ಟಿಗೆ 1953 ರಲ್ಲಿ ಭಾಗ ತೆಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ.

ಸದರಿ ತಿಮ್ಮಪ್ಪನ ಹಿಸ್ಸೆಗೆ ಬಂದ ಆಸ್ತಿಗಳು ಬೋಕಿಕೆರೆ ಗ್ರಾಮದ ಸರ್ವೆ ನಂ. 79 ರಲ್ಲಿ 2 ಎಕರೆ 10 ಗುಂಟೆ, ಸರ್ವೆ ನಂ. 86 ರಲ್ಲಿ 1 ಎಕರೆ, ಸರ್ವೆ ನಂ. 87 ರಲ್ಲಿ 20 ಗುಂಟೆ, ಚನ್ನಸಮುದ್ರದ ಸರ್ವೆ ನಂ. 36 ರಲ್ಲಿ 28 ಗುಂಟೆ, ಮಳಲಿ ಗ್ರಾಮದ ಸರ್ವೆ ನಂ. 253 ರಲ್ಲಿ 1 ಎಕರೆ 1 ಗುಂಟೆ ಬಂದಿರುತ್ತವೆ. ಸದರಿ ಅಸ್ತಿಗಳನ್ನು ತಿಮ್ಮಪ್ಪ ಮೃತಪಟ್ಟ ನಂತರ ಅವನ ಮಕ್ಕಳಾದ 9 ರಿಂದ 11 ನೇ ಪ್ರತಿವಾದಿಗಳ ಅನುಭವಿಸುತ್ತಿದ್ದಾರೆ ಎನ್ನುವುದು ನಿಜ. ಸದರಿ ಮೇಲೆ ಹೇಳಿದ ತಿಮ್ಮಪ್ಪನ ಭಾಗಕ್ಕೆ ಬಂದ ಆಸ್ತಿಗಳು ಈ ದಾವೆಯಲ್ಲಿ ಸೇರಿಲ್ಲ ಎನ್ನುವುದು ನಿಜ. ಸದರಿ ತಿಮ್ಮಪ್ಪ ಭಾಗ ತೆಗೆದುಕೊಂಡು ಹೋದ ನಂತರ ನಮ್ಮ ತಂದೆ , ನಮ್ಮ ದೊಡ್ಡಪ್ಪ ಬೋಗಪ್ಪ ಮತ್ತು ಹನುಮಂತಪ್ಪ ಒಟ್ಟಿಗೆ ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾನೆ. ನಮ್ಮ ತಂದೆ ಲಿಖಿತ ಹೇಳಿಕೆಯಲ್ಲಿ ಏನು ಹೇಳಿರುತ್ತಾನೆ ಎಂದು ತಿಳಿದುಕೊಂಡಿಲ್ಲ. ನಮ್ಮ ತಂದೆ ಮೃತಪಟ್ಟ ನಂತರ ನಾನು ಮತ್ತು ಹೆಚ್ ರಾಮಪ್ಪ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತೇವೆ. ನಾನು ಮತ್ತು ಸದರಿ ಹೆಚ್ ರಾಮಪ್ಪ ಲಿಖಿತ ಹೇಳಿಕೆಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಹೆಚ್ ರಾಮಪ್ಪ ಇವನ ಸಾಕ್ಷಿ ವಿಚಾರಣೆಯಲ್ಲಿ ಏನು ಪ್ರಶ್ನೆಗಳನ್ನು ವಾದಿಗಳ ಪರ ವಕೀಲರು ಕೇಳಿರುತ್ತಾರೆ ಎನ್ನುವುದನ್ನು ತಿಳಿದುಕೊಂಡಿರುತ್ತೇನೆ. ಮುಂದುವರೆದ ಪಾಟೀ ಸವಾಲು ವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.